# ಪಂಚಾಯತಿ ರಾಜ್ಯ

## ಒಂದು ಸಮೀಕ್ಷೆ

**ಕರ್ನಾಟಕ ಜಿಲ್ಲಾ ಪರಿಷತ್, ಮಂಡಲ ಪಂಚಾಯತ ಮತ್ತು ನ್ಯಾಯ ಪಂಚಾಯತ ಮಸೂದೆಯ (೧೯೮೩) ವಿಶ್ಲೇಷಣೆ**

ಕರ್ನಾಟಕ
ಗ್ರಾಮಾಭ್ಯುದಯ ಸ್ವಯಂಸೇವಾ ಸಂಸ್ಥೆಗಳ
ಒಕ್ಕೂಟ

01388
1388

## ಗ್ರಾಮಸಭೆಯಿಂದ ಲೋಕಸಭೆವರೆಗೆ

ನಮಗೆ ಈಗ ಕಾಣುವಂತೆ ಪಂಚಾಯಿತಿ ರಾಜ್ಯ ಎಂದರೆ, ನೆಲದಿಂದ ಮೇಲುಗಡೆಗೆ ಕ್ರಮವಾಗಿ ದಕ್ಷತೆ ಸಾಮರ್ಥ್ಯಗಳ ವೃದ್ಧಿ ಮತ್ತು ಕೇಂದ್ರದಿಂದ ನೆಲಕ್ಕೆ ಅದೇ ರೀತಿಯ ಜವಾಬ್ದಾರಿಯ ವರ್ಗಾವಣೆ. ಮೇಲಕ್ಕೆ ಏರಬೇಕು ಎನ್ನುವವರು ತನ್ನ ಹೆಗಲಿನ ಭಾರವನ್ನು ಸಾಧ್ಯವಿದ್ದಷ್ಟು ತಗ್ಗಿಸಿಕೊಳ್ಳಬೇಕು. ಇಲ್ಲದಿದ್ದರೆ ಅಪಾಯ ಎಂಬುದು ಪರ್ವತಾರೋಹಿಗಳಿಗೆ ಗೊತ್ತು. ತನ್ನ ಹಂತಕ್ಕೆ ಸರಿಯಾಗಿ ಕೆಲಸ ಮಾಡಬೇಕು, ಎಂದರೆ, ರಾಜ್ಯಸರಕಾರ ಮಾಡ

ಬಹ
ರಾ
ಯಾ
ದಾ
ರೀ
ಒಂ
ಸಂ
ಒಂ
ಘ
ಮಾ
ರಾ
ಇತ

COMMUNITY HEALTH CELL

# ಪಂಚಾಯತಿ ರಾಜ್ಯ

## ಒಂದು ಸಮೀಕ್ಷೆ

ಕರ್ನಾಟಕ ಜಿಲ್ಲಾ ಪರಿಷತ್, ಮಂಡಲ ಪಂಚಾಯತ
ಮತ್ತು ನ್ಯಾಯ ಪಂಚಾಯತ ಮಸೂದೆಯ (೧೯೮೩)
ವಿಶ್ಲೇಷಣೆ

ಕರ್ನಾಟಕ
ಗ್ರಾಮಾಭ್ಯುದಯ ಸ್ವಯಂಸೇವಾ ಸಂಸ್ಥೆಗಳ
ಒಕ್ಕೂಟ

# ಅರಿಕೆ

ರಾಜ್ಯದ ರಾಜಕೀಯ ಹಂದರದ ಮೇಲೆ, ವಿಶೇಷವಾಗಿ ಗ್ರಾಮಜೀವನದ ಮೇಲೆ ವ್ಯಾಪಕ ಪರಿಣಾಮ ಬೀರಲಿದೆ, ಇದೀಗ ಕರ್ನಾಟಕ ವಿಧಾನಸಭೆಯು ಪರಿಶೀಲನೆಯಲ್ಲಿರುವ 'ಕರ್ನಾಟಕ ಜಿಲ್ಲಾ ಪರಿಷತ್, ಮಂಡಲ ಪಂಚಾಯತ ಮತ್ತು ನ್ಯಾಯ ಪಂಚಾಯತ ಮಸೂದೆ, ೧೯೮೩'.

ಕರ್ನಾಟಕ ಗ್ರಾಮಾಭ್ಯುದಯ ಸ್ವಯಂಸೇವಾ ಸಂಸ್ಥೆಗಳ ಒಕ್ಕೂಟ (ಫೆಡರೇಶನ್ ಆಫ್ ವಾಲಂಟರಿ ಆರ್ಗಾನಿಸೇಶನ್ಸ್ ಫರ್ ರೂರಲ್ ಡೆವಲಪ್‌ಮೆಂಟ್ ಇನ್ ಕರ್ನಾಟಕ-- **FEVORD-K**) ೧೯೮೩ ಆಗಸ್ಟ್ ೭ರಂದು ಬೆಂಗಳೂರಿನಲ್ಲಿ ಸಭೆಸೇರಿ, ಜಿಲ್ಲಾ ಪರಿಷತ್ ಮಸೂದೆಯನ್ನು ಕೂಲಂಕಷವಾಗಿ ಪರೀಕ್ಷಿಸಲು ಉಪಸಮಿತಿಯೊಂದನ್ನು ನೇಮಿಸಿತು. ಸಮಿತಿಯ ಸದಸ್ಯರು :

(೧) ಪ್ರೊ॥ ಬಿ. ಕೆ. ನಾರಾಯಣ್,
ಪ್ರಾಧ್ಯಾಪಕರು, ಸಾಮಾಜಿಕ ಮತ್ತು ಆರ್ಥಿಕ ಪರಿವರ್ತನ ಅಧ್ಯಯನ ಸಂಸ್ಥೆ (**ISOEC**), ಬೆಂಗಳೂರು.

(೨) ಶ್ರೀ ಬಿ. ರುದ್ರಮೂರ್ತಿ,
ಅಧ್ಯಕ್ಷರು, ಮಲ್ಟಿ ಪ್ರಾಜೆಕ್ಟ್ ಅಂಡ್ ಡೆವಲಪ್‌ಮೆಂಟ್ ಕನ್ಸಲ್ಟೆಂಟ್ಸ್ (**MPDC**), ಬೆಂಗಳೂರು.

(೩) ಶ್ರೀ ಎಸ್. ಆರ್. ರಾಮಸ್ವಾಮಿ
ಸಂಪರ್ಕಾಧಿಕಾರಿ, ಆರೋಗ್ಯ ವಿಕಾಸ ಪ್ರಕಲ್ಪ, ಬೆಂಗಳೂರು.

ಸಮಿತಿಯು ಅಧ್ಯಯನಾನಂತರ ಕರ್ನಾಟಕ ಸರ್ಕಾರಕ್ಕೆ ೧೯೮೩ರ ಸೆಪ್ಟೆಂಬರಿನಲ್ಲಿ ಮನವಿಯೊಂದನ್ನು ಸಲ್ಲಿಸಿತು. ಆ ಮನವಿಯನ್ನು ಈ ಪುಸ್ತಿಕೆಯಲ್ಲಿ (ಭಾಗ-೩) ಸಾರ್ವಜನಿಕರ ಅವಗಾಹನೆಗಾಗಿ ಉದ್ಧೃತಪಡಿಸಲಾಗಿದೆ. ಪೀಠಿಕಾಭಾಗದಲ್ಲಿ (ಭಾಗ ೧-೨) ಪಂಚಾಯತಿ ರಾಜ್ಯವ್ಯವಸ್ಥೆಯ ಸ್ವರೂಪವನ್ನೂ ತಮ್ಮ ಪ್ರತಿನಿಧಿಗಳಲ್ಲಿ ಗ್ರಾಮೀಣ ಜನರು ಅಪೇಕ್ಷಿಸಬೇಕಾದ ಅರ್ಹತೆಗಳನ್ನೂ ಪ್ರಸ್ತಾವಿಸಲಾಗಿದೆ.

ಈ ಸಮೀಕ್ಷೆಯನ್ನು ಸಿದ್ಧಪಡಿಸಿದ ಉಪಸಮಿತಿಗೂ, ಈ ಪುಸ್ತಿಕೆಯ ಪ್ರಕಟನೆಯಲ್ಲಿ ನೆರವಾದ ರಾಯಚೂರು ಜಿಲ್ಲೆ ಗಿಲ್ಲೆಸೂಗೂರಿನ 'ಇನ್‌ಗ್ರಿಡ್' (INGRID) ಸಂಸ್ಥೆಗೂ ಕ. ಗ್ರಾ. ಸ್ವ. ಸಂ. ಒಕ್ಕೂಟ ಆಭಾರಿಯಾಗಿದೆ.

ಸಾಮಯಿಕವಾದ ಈ ಪ್ರಕಟನೆಯು ಪಂಚಾಯತಿ ರಾಜ್ಯದ ಬಗೆಗೆ ಆಸಕ್ತರಾದ ಎಲ್ಲರಿಗೂ ಪ್ರಯೋಜನಕರವಾದೀತೆಂಬುದು ಕ. ಗ್ರಾ. ಸ್ವ. ಸಂ. ಒಕ್ಕೂಟದ ಆಶಯ.

ಮಡ್ಲೇರಿ-೫೮೧ ೨೧೧
ಅಕ್ಟೋಬರ್ ೩೦, ೧೯೮೩

ಎಸ್. ಆರ್. ಹಿರೇಮಠ
ಅಧ್ಯಕ್ಷ, ಕ. ಗ್ರಾ. ಸ್ವ. ಸಂ. ಒ.

COMMUNITY HEALTH CELL
47/1, (First Floor) St. Marks Road
BANGALORE - 560 001
COMH-349

# ೧. ಪಂಚಾಯತಿ ರಾಜ್ಯದ ಸ್ವರೂಪ, ಮಹತ್ತ್ವ

ಪಂಚಾಯತಿ ರಾಜ್ಯವೆಂಬುದು ಜನಗಳಿಗಾಗಿ ಯೋಜಿತವಾಗಿ ಜನಗಳಿಂದಲೇ ನಡೆಸಲ್ಪಡುವ ಸಂಸ್ಥೆ. ಆಡಳಿತದಲ್ಲಿ ಜನಗಳೇ ನೇರವಾಗಿ ಪಾಲ್ಗೊಳ್ಳುವುದು, ಜನಗಳ ನಿರ್ಣಯಾಧಿಕಾರ, ವಿವಾದಗಳನ್ನು ಜನಗಳೇ ಇತ್ಯರ್ಥ ಮಾಡುವುದು, ಅಭ್ಯುದಯದ ಯೋಜನೆಗಳನ್ನು ಜನ ತಾವೇ ರೂಪಿಸಿ ನಡೆಸುವುದು—ಇದು ಪಂಚಾಯತಿ ರಾಜ್ಯ ಸಂಸ್ಥೆಯ ಹೃದಯ. ಇದು ಗ್ರಾಮಮಟ್ಟದಲ್ಲಿ, ಗ್ರಾಮೀಣ ಜನರಿಂದಲೇ ನಡೆಯುವುದಾದ್ದರಿಂದ, ಈಗ ಸಾಮಾನ್ಯ ರೂಢಿಯಲ್ಲಿರುವ ಆಡಳಿತದ ಪರೋಕ್ಷ ಸ್ವರೂಪವನ್ನು ತಪ್ಪಿಸುವುದೆಂಬುದು ಪಂಚಾಯತಿ ರಾಜ್ಯದ ಮುಖ್ಯ ಲಕ್ಷಣ. ಜನಗಳು ನೇರವಾಗಿ ಪಾಲ್ಗೊಳ್ಳುವುದಷ್ಟೆ ಅಲ್ಲದೆ, ತಮ್ಮ ಕಲ್ಪನೆ-ಅಭಿಪ್ರಾಯ–ಯೋಜನೆಗಳು ತಮ್ಮ ಕಣ್ಣೆದುರಲ್ಲೆ ಕಾರ್ಯಗತವಾಗುವುದು ಈ ವ್ಯವಸ್ಥೆಯಲ್ಲಿ ಸಾಧ್ಯ. ಈ ವ್ಯವಸ್ಥೆಯನ್ನು ಜನ ಆದರಿಸುವುದೂ ಇದೇ ಕಾರಣದಿಂದ; ಪಂಚಾಯತಿ ರಾಜ್ಯವನ್ನು ರಾಮರಾಜ್ಯವೆಂದು ಹೊಗಳುವುದೂ ಇದೇ ಕಾರಣದಿಂದ. ಜನತೆಯ ನೇರ ಸಹಭಾಗಿತ್ವ, ಕಾರ್ಯ ಪ್ರಯತ್ನ, ಸಂಪನ್ಮೂಲಗಳ ಬಳಕೆ, ಫಲಿತಾಂಶ—ಈ ವಿವಿಧ ಅಂಗಗಳ ನಡುವೆ ನಿಕಟವಾದ ಹೊಂದಾಣಿಕೆ ಇರುವುದು ಪಂಚಾಯತಿ ರಾಜ್ಯದ ಮೇಲ್ಮೆ. ಅತ್ಯವಶ್ಯವಾದ ಈ ಹೊಂದಾಣಿಕೆ ಈಗಿನ ಬೃಹದ್ವ್ಯಾಪ್ತಿಯ ಪರೋಕ್ಷ ಸರ್ಕಾರ ರೀತಿಯಲ್ಲಿ ಅಲಭ್ಯವೆಂಬುದು ಎಲ್ಲರಿಗೂ ತಿಳಿದ ಸಂಗತಿ.

ಪ್ರಯತ್ನ, ಫಲಿತಾಂಶಗಳ ನಡುವಣ ನಿಕಟತೆಯಿಂದಾಗಿ ಪಂಚಾಯತಿ ರಾಜ್ಯ ವ್ಯವಸ್ಥೆಯಲ್ಲಿ ಕಾರ್ಯಕ್ರಮಗಳ ಪ್ರಗತಿಯನ್ನು ಆಗಿಂದಾಗಲೇ ಪರೀಕ್ಷಿಸಿ, ಸಾಧನೆ ಅಸಮರ್ಪಕವಾಗಿದ್ದಲ್ಲಿ ಅಗತ್ಯವಾದ ಸುಧಾರಣಕ್ರಮಗಳನ್ನು ಕೈಗೊಳ್ಳುವುದು ಸಾಧ್ಯವಾಗುತ್ತದೆ.

ಪಂಚಾಯತಿ ವ್ಯವಸ್ಥೆ ಸಾಕಷ್ಟು ಹಿಂದಿನ ಕಾಲದಿಂದ ರೂಢಿಯಲ್ಲಿದ್ದದ್ದೇ. ಮೊದಮೊದಲು ನ್ಯಾಯನಿರ್ಣಯಕ್ಕೆ ಸೀಮಿತವಾಗಿದ್ದ ಪಂಚಾಯತಿಗಳು ಕ್ರಮೇಣ ರಾಜಕೀಯ, ಸಾಮಾಜಿಕ, ಆರ್ಥಿಕ ಹೊಣೆಗಾರಿಕೆಗಳನ್ನೂ ವಹಿಸಿಕೊಂಡಿತು. ಬ್ರಿಟಿಷರ ಆಳ್ವಿಕೆಯಲ್ಲಿ ಈ ಹಳೆಯ ಗ್ರಾಮವ್ಯವಸ್ಥೆ ಕುಂಠಿತವಾಯಿತು. ಹಳೆಯ ವ್ಯವಸ್ಥೆಗೆ ಪರ್ಯಾಯವಾಗಿ ಯಾವ ಸರಕಾರ ಪದ್ಧತಿಯೂ ಸ್ಥಳೀಯ ಎಂದರೆ ಗ್ರಾಮಮಟ್ಟದಲ್ಲಿ ಅಸ್ತಿತ್ವಕ್ಕೆ ಬರಲಿಲ್ಲ. ಹೀಗೆ ಕೇಂದ್ರ ಹಾಗೂ ಪ್ರಾಂತಮಟ್ಟಗಳಲ್ಲಿ ಸರ್ಕಾರಗಳು ಅಧಿಷ್ಠಿತವಾದುವು; ಗ್ರಾಮಮಟ್ಟದ ಸಹಭಾಗಿತ್ವ ಮಾಯವಾಯಿತು.

ಸ್ಥಳೀಯ ಅಂದರೆ ಗ್ರಾಮಮಟ್ಟದಲ್ಲಿ ಜನದ ಸಹಭಾಗಿತೆಯ ಅಭಾವವೇ ಕೇಂದ್ರದ ಹಾಗೂ ರಾಜ್ಯ ಸರ್ಕಾರಗಳ ಬೃಹದ್ಯೋಜನೆಗಳು ವಿಫಲವಾಗುವುದಕ್ಕೆ ಕಾರಣವೆಂಬುದು ಎಲ್ಲರ ಮನವರಿಕೆ. ಕೊಂಚಮಟ್ಟಿನ ಸಾಧನೆ ಆಗಿದ್ದರೂ ಅದು ಗರಿಷ್ಠ ಮಟ್ಟದ ಸರ್ವಾಂಗೀಣ ದೀರ್ಘಕಾಲದ ಅಭ್ಯುದಯಕ್ಕೆ ದಾರಿಮಾಡಲಿಲ್ಲ. ಈ ಅಂತಿಮ ಗುರಿಯ ಸಾಧನೆಗೆ ಪಂಚಾಯತಿ ವ್ಯವಸ್ಥೆಯೇ ಮಾರ್ಗ.

ಅಭ್ಯುದಯ ಪ್ರಯತ್ನ ವ್ಯಕ್ತಿಕೇಂದ್ರಿತವೆಂಬುದು ಪಂಚಾಯತಿ ವ್ಯವಸ್ಥೆಯ ಮತ್ತೊಂದು ಗುಣಾಂಶ. ಪ್ರಯತ್ನವು ಮೊದಲು ಪ್ರತ್ಯೇಕ ವ್ಯಕ್ತಿಯಿಂದ ಸ್ಥಳೀಯ ಮಟ್ಟದಲ್ಲಿ ಆರಂಭವಾಗಿ, ಕ್ರಮೇಣ ಸ್ಥಳೀಯ ಸಮುದಾಯವನ್ನು ಒಳಗೊಳ್ಳುತ್ತದೆ. ಈ ವ್ಯವಸ್ಥೆಯಲ್ಲಿ ಎಲ್ಲರಿಗೂ ಸಮಾನಾವಕಾಶ ದೊರೆಯುತ್ತದೆ. ಪ್ರಯತ್ನದ ಸಹಜ ವಿಸ್ತಾರವ ಪ್ರಗತಿಗೂ ಅವಕಾಶ ಕಲ್ಪಿತವಾಗುವುದರ ಜೊತೆಗೆ, ವ್ಯಕ್ತಿವಿಕಾಸ–ವ್ಯಕ್ತಿ ಪ್ರಯತ್ನಗಳ ಮೂಲಕ ನಿಜವಾದ ಸಮುದಾಯಾಭ್ಯುದಯ ಹೀಗೆ ಸಾಧ್ಯವಾಗುತ್ತದೆ, ಪರೋಕ್ಷ ಆಡಳಿತದಿಂದ ಪ್ರಗತಿಗೆ ತೋರುವ ಪ್ರತಿಬಂಧಕಗಳನ್ನು ನಿವಾರಿಸುವುದರಲ್ಲಿ ಪಂಚಾಯತಿ ವ್ಯವಸ್ಥೆಯ ಪಾತ್ರ ಮಹತ್ವದ್ದಿದೆ.

# ೨. ಜನತೆಯ ಪ್ರತಿನಿಧಿಗಳಿಗಿರಬೇಕಾದ ಅರ್ಹತೆಗಳು

ಕೇಂದ್ರ ಮತ್ತು ರಾಜ್ಯ ಮಟ್ಟದಲ್ಲಷ್ಟೆ ಸರಕಾರ ಅಧಿಷ್ಠಿತವಾಗಿದ್ದಲ್ಲಿ ಅಭ್ಯುದಯ ಪ್ರಯತ್ನದಲ್ಲಿ ಜನದ ಸಹಭಾಗಿತೆ ಇರಲಾರದು. ಒಂದು ಅನುಭವಜನ್ಯ ಗಾದೆಮಾತು ಇದು :

I here, I forget;
I see, I remember;
I do, I understand.

("ಕಿವಿಯಿಂದಷ್ಟೇ ಕೇಳಿದ್ದನ್ನು ಮರೆಯುತ್ತೇವೆ. ಕಣ್ಣಿಂದ ನೋಡಿದ್ದನ್ನು ನೆನಪಿನಲ್ಲಿ ಉಳಿಸಿಕೊಳ್ಳುತ್ತೇವೆ. ನಾವೇ ಕೈಯಿಂದ ಮಾಡಿದಾಗ ವಿಷಯದ ಪೂರ್ಣಸ್ವರೂಪ ನಮಗೆ ಅರ್ಥವಾಗುತ್ತದೆ.")

ಅಭ್ಯುದಯದ ಹೃದಯವೇ ಜನರ ಸಹಭಾಗಿತೆ. ಎಲ್ಲ ಮಟ್ಟಗಳಲ್ಲೂ ಪ್ರಜಾಪ್ರಭುತ್ವ ಅಭ್ಯಾಸಗತವಾಗಬೇಕಾದರೆ ಜನರಿಗೆ ಅಭ್ಯುದಯ ಪ್ರಯತ್ನದಲ್ಲಿ ಭಾಗವಹಿಸುವ ಅವಕಾಶಗಳಿರಬೇಕು. ನಿತ್ಯ ಜಾಗರೂಕತೆಯೇ ಪ್ರಜಾಪ್ರಭುತ್ವಕ್ಕೆ ನಾವು ತೆರಬೇಕಾವ ಬೆಲೆ.

ಈ ಜಾಗರೂಕತೆಯ ಆಚರಣೆ ಹೇಗೆ ?

i) ಯೋಗ್ಯರಾದ ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದರಿಂದ;

ii) ಆಯ್ಕೆಯಾಗಿ ನಿಯುಕ್ತವಾದ ಪ್ರತಿನಿಧಿ ಮಂಡಳಿಯ ಕಾರ್ಯದ ಪರೀಕ್ಷಣೆಯಿಂದ;

iii) ಆಗಿಂದಾಗಲೇ ಅಗತ್ಯ ಸುಧಾರಣ ಕ್ರಮಗಳನ್ನು ಕೈಗೊಳ್ಳುವುದರಿಂದ;

vi) ಅನರ್ಹರೆಂದು ಸಿದ್ಧಪಟ್ಟ ಪ್ರತಿನಿಧಿಗಳನ್ನು ಅಧಿಕಾರಚ್ಯುತಗೊಳಿಸುವುದರಿಂದ.

ಪ್ರತಿನಿಧಿ ಮಂಡಳಿಯ ಸಾಧನೆ–ವೈಫಲ್ಯಗಳ ಪರೀಕ್ಷಣೆ, ಮೌಲ್ಯಮಾಪನದಲ್ಲಿ ಖಾಸಗಿ ಗ್ರಾಮಾಭ್ಯುದಯ ಸ್ವಯಂಸೇವಾಸಂಸ್ಥೆಗಳು ನೆರವಾಗಬಲ್ಲವು. ಆದರೆ ಅಭ್ಯರ್ಥಿಗಳ ಆಯ್ಕೆ-ತಿರಸ್ಕಾರಗಳು ಸಂಪೂರ್ಣವಾಗಿ ಜನರ ಹೊಣೆಗಾರಿಕೆ. ಪ್ರಜಾಪ್ರಭುತ್ವ ವ್ಯವಸ್ಥೆಯು ದಾರಿತಪ್ಪದಂತೆ ನೋಡಿಕೊಳ್ಳುವ ಮುಖ್ಯಾಂಗ—ಖಾಸಗಿ ಸ್ವಯಂಸೇವಾ ಸಂಸ್ಥೆಗಳು.

ಪಂಚಾಯತಿ ರಾಜ್ಯದಲ್ಲಿ ವಿವಿಧ ಪ್ರತಿನಿಧಿ ಮಂಡಳಿಗಳ ಅಭ್ಯರ್ಥಿಗಳು ಎಂಥವರಾಗಿರಬೇಕು ? ಪ್ರತಿನಿಧಿಗಳನ್ನು ಆಯ್ಕೆ ಮಾಡುವಲ್ಲಿ ಜನರು ಮನಸ್ಸಿನಲ್ಲಿರಿಸಿಕೊಳ್ಳಬೇಕಾದ ಕೆಲವು ದಿಕ್ಸೂಚಿಗಳು ಇವು :

೧) ಅಭ್ಯರ್ಥಿ ಸ್ಥಳೀಯ ಜನಜೀವನದ ಮತ್ತು ಸ್ಥಳೀಯ ವಿದ್ಯಮಾನಗಳ ಪರಿಚಯ ಪಡೆದಿರಬೇಕು.

೨) ಹೊಸ ಪ್ರಗತಿಪರ ಯೋಜನೆಗಳಿಗೆ ವಿಮುಖನಾಗದಿರುವುದು: ಸ್ವಂತ ಆಲೋಚನೆ, ಕಾರ್ಯೋತ್ಸಾಹ, ಹೊಂದಿಕೊಂಡು ನಡೆಯುವ ಗುಣ.

೩) ಪ್ರಾಮಾಣಿಕತೆ.

೪) ನಿಃಸ್ವಾರ್ಥತೆ.

೫) ಇತರರಿಗೆ ಮಾರ್ಗದರ್ಶನ ಕೊಡಬಲ್ಲ ಸಾಮರ್ಥ್ಯ.

೬) ಪ್ರಜಾಪ್ರಭುತ್ವ ಪದ್ಧತಿಯಲ್ಲಿ ವಿಶ್ವಾಸ.

೭) ಜನರಿಗೆ ತಾನು ಬಾಧ್ಯನೆಂಬ ಹೊಣೆಗಾರಿಕೆಯ ಅರಿವು.

೮) ಜನರ ಅಗತ್ಯಗಳಿಗೆ ಸ್ಪಂದಿಸುವ ಮನೋಧರ್ಮ.

೯) ಎಲ್ಲರೊಡನೆ ತೆರೆದ ಮನಸ್ಸಿನಿಂದ ವ್ಯವಹರಿಸಬಲ್ಲ ಕೌಶಲ.

೧೦) ವಿವಾದಗಳನ್ನು ಸಮರ್ಪಕವಾಗಿ ಇತ್ಯರ್ಥಮಾಡಬಲ್ಲ ನ್ಯಾಯದೃಷ್ಟಿ.

೧೧) ಭಿನ್ನ ಅಭಿಪ್ರಾಯಗಳನ್ನು ತಳೆದ ಜನಸಮೂಹಗಳ ಸೌಹಾರ್ದ ಗಳಿಸುವ ಸಾಮರ್ಥ್ಯ.

೧೨) ಅಭ್ಯುದಯಕ್ಕೆ ಪೋಷಕವಾದ ಮನೋವೃತ್ತಿ, ಅಭ್ಯುದಯದ ಗಮ್ಯ ಹಾಗೂ ಕಲ್ಪನೆಯ ಸರಿಯಾದ ಮನವರಿಕೆ.

ಒಬ್ಬೊಬ್ಬ ಪ್ರತಿನಿಧಿಯಲ್ಲಿಯೂ ಮೇಲಣ ಎಲ್ಲ ಗುಣಗಳೂ ಇದ್ದಾವೆಂದು ಆಶಿಸುವುದು ಅವಾಸ್ತವಿಕವಾಗುತ್ತದೆ. ಇವುಗಳಲ್ಲಿ ಕೆಲಕೆಲವು ಗುಣಗಳನ್ನಾದರೂ ಪ್ರತಿನಿಧಿಗಳು ಪಡೆದಿದ್ದಲ್ಲಿ, ಅಂಥವರ ಸಮೂಹದಿಂದ ರಚನಾತ್ಮಕ ಕಾರ್ಯ ಶಕ್ಯವಾಗುತ್ತದೆ. ತ್ಯಾಗಬುದ್ಧಿ, ಸೇವಾ ಮನೋಭಾವ, ಕಾರ್ಯಶ್ರದ್ಧೆ—ಇವು ಅಭ್ಯರ್ಥಿಗಳಲ್ಲಿ ಎಷ್ಟು ಮೇಲ್ಮಟ್ಟದ್ದಾಗಿರುತ್ತವೋ ಅಷ್ಟುಮಟ್ಟಿಗೆ ಪಂಚಾಯತಿ ರಾಜ್ಯವ್ಯವಸ್ಥೆ ಕೃತಾರ್ಥವಾಗುತ್ತದೆ.

## ೩. ಕರ್ನಾಟಕ ಜಿಲ್ಲಾ ಪರಿಷತ್, ಮಂಡಲ ಪಂಚಾಯತ ಮತ್ತು ನ್ಯಾಯ ಪಂಚಾಯತ ಮಸೂದೆ, ೧೯೮೩

### ೧. ಭೂಮಿಕೆ

ಕರ್ನಾಟಕ ಜಿಲ್ಲಾ ಪರಿಷತ್, ಮಂಡಲ ಪಂಚಾಯತ ಹಾಗೂ ನ್ಯಾಯ ಪಂಚಾಯತ ಮಸೂದೆ ಇದೀಗ ಶಾಸನಸಭೆಯ ಮುಂದಿದೆ. ಈ ಮುಖ್ಯವಾದ, ವ್ಯಾಪಕವಾದ ಮಸೂದೆಯನ್ನು ಕುರಿತು ವಿವಿಧ ವೇದಿಕೆಗಳಲ್ಲಿ ಚಿಂತನೆ, ಚರ್ಚೆ ನಡೆದಿದೆ. ಕರ್ನಾಟಕದ ಗ್ರಾಮಾಭ್ಯುದಯ ಸ್ವಯಂಸೇವಾ ಸಂಸ್ಥೆಗಳ ಒಕ್ಕೂಟವೂ (ಕ. ಗ್ರಾ. ಸ್ವ. ಸಂ. ಒ.– FEVORD–K) ಮಸೂದೆಯನ್ನು ಪರಿಶೀಲಿಸಿ, ಕೆಲವು ಸಲಹೆಗಳನ್ನು ಮಂಡಿಸ ಬಯಸಿದೆ. ಪ್ರಸಕ್ತ ಮಸೂದೆಯಲ್ಲಿನ ಅನೇಕ ಸಂಗತಿಗಳು ಪ್ರಜಾಪ್ರಭುತ್ವ ತತ್ತ್ವಕ್ಕೆ ಎಷ್ಟು ಮಟ್ಟಿಗೆ ಹೊಂದುತ್ತವೆಂಬುದನ್ನು ಪರೀಕ್ಷಿಸಬೇಕಾಗಿದೆ. ಮಹಾತ್ಮ ಗಾಂಧಿ ಹಾಗೂ ಇತರ ರಾಷ್ಟ್ರೀಯ ನಾಯಕರುಗಳ ವಿಚಾರಧಾರೆ, ಸ್ವಾತಂತ್ರ್ಯದಾರಭ್ಯ ಆಗಿರುವ ಬೆಳವಣಿಗೆಗಳು, ಸಾಮಾಜಿಕ–ಆರ್ಥಿಕ ಸಮಂಜಸತೆ ಹಾಗೂ ಭವಿಷ್ಯದ ಅಗತ್ಯಗಳು– ಇವುಗಳ ಹಿನ್ನೆಲೆಯಲ್ಲಿ ಪರಾಮರ್ಶೆ ನಡೆಸಿ ಕ. ಗ್ರಾ. ಸ್ವ. ಸಂ. ಒ ಮಸೂದೆಯನ್ನು ಕುರಿತು ಅಭಿಪ್ರಾಯ ನಿರ್ಮಿಸಿಕೊಂಡಿದೆ.

ಪಂಚಾಯತಿ ರಾಜ್ಯವು ಸಾರ್ಥಕವಾಗಬೇಕಾದರೆ ಅದು ಕೆಲವೊಂದು ಪ್ರಾಥಮಿಕ ಆವಶ್ಯಕತೆಗಳನ್ನು ಪೂರೈಸಲೇಬೇಕು. ಪ್ರಜೆಗಳು ಚುನಾಯಿತ ಪ್ರತಿನಿಧಿಗಳಿಗೆ ಆಡಳಿತಾಧಿಕಾರ ಒಪ್ಪಿಸುತ್ತಾರೆ. ನಂತರ ಅವರುಗಳು ತಮಗಿದ್ದ ಅಧಿಕಾರಾವಧಿಯ ವರೆಗೆ ಕೇಂದ್ರ ಹಾಗೂ ರಾಜ್ಯಗಳ ಆಡಳಿತಕ್ಕೆ ಆವಶ್ಯಕ ಅಂಗಗಳನ್ನು ರಚಿಸುತ್ತಾರೆ.

### ೨. ಅಧಿಕಾರದ ವರ್ಗಾವಣೆ

ಪ್ರಜೆಗಳೇ ಅಧಿಕಾರದ ನಿಜವಾದ ಆಧಾರ, ಹಾಗೂ ಆಡಳಿತದಲ್ಲಿರುವವರು ಪ್ರಜೆಗಳ ಪ್ರತಿನಿಧಿಗಳು—ಎಂಬ ತಿಳುವಳಿಕೆ ನಮ್ಮ ಜನಗಳಲ್ಲಿ ಇನ್ನೂ ವ್ಯಾಪಕವಾಗಿ ಮೂಡಿಲ್ಲ. ಪ್ರಜಾಪ್ರಭುತ್ವದ ಶಕ್ತಿ ಇಂಥ ಜಾಗೃತ ಪ್ರಜ್ಞೆಯಲ್ಲೇ ಅಡಗಿರುವುದು ಅಲ್ಲದೆ ಎಲ್ಲ ಸ್ತರಗಳಲ್ಲಿನ ಪ್ರಜಾಪ್ರಭುತ್ವವಾದಿ ಸಂಸ್ಥೆಗಳು ಬಲಿಷ್ಠಗೊಳ್ಳುವುದೂ ಈ ತಿಳುವಳಿಕೆಯಿಂದಲೇ. ಜನರ ಕೈಯಲ್ಲಿರುವ ಅಧಿಕಾರ ಚಲಾವಣೆಯ ದೃಷ್ಟಿಯಿಂದ

ರೂಪಿಸುವ ಎಲ್ಲ ಕಾನೂನುಗಳನ್ನೂ ಎರಡು ದೃಷ್ಟಿಕೋನಗಳಿಂದ ನೋಡಬೇಕಾಗುತ್ತದೆ :

೧) ಸಿದ್ಧಾಂತದ ದೃಷ್ಟಿಯಿಂದ;

೨) ಆಚರಣೆಯ ದೃಷ್ಟಿಯಿಂದ.

## ೩. ಪಂಚಾಯತಿ ರಾಜ್ಯದ ಆವಶ್ಯಕತೆ

ಪ್ರಚಲಿತ ಭಾರತೀಯ ರಾಜ್ಯವ್ಯವಸ್ಥೆಯು ಸಮತೋಲ ಹಾಗೂ ದೃಢತೆಗಳ ಕೊರತೆಯಿಂದಾಗಿ ಅಪೇಕ್ಷಿತ ಫಲ ನೀಡುತ್ತಿಲ್ಲ. ಇದಕ್ಕೆ ಒಂದು ಮುಖ್ಯ ಕಾರಣವೆಂದರೆ ರಾಜ್ಯದ ವ್ಯವಹಾರಗಳಲ್ಲಿ ಪ್ರಜೆಗಳು ತಮ್ಮ ಪಾತ್ರವನ್ನು ಕೇವಲ ಕಾಲಕಾಲಕ್ಕೆ ಬರುವ ಚುನಾವಣೆಗಳಲ್ಲಿ ಮತ ಹಾಕುವುದಕ್ಕೆ ಮಾತ್ರ ಸೀಮಿತಗೊಳಿಸಿದ್ದು, ಚುನಾವಣೆಗಳು ಬರಿಯ ಒಂದು ಕಟ್ಟಳೆಯಾಗಿದೆ. ಚುನಾವಣೆಯು ಜನಗಳೇ ಅಧಿಕಾರದ ಆಧಾರ ಎಂಬುದರ ಸಂಕೇತ ಮಾತ್ರ ಎಂಬ, ಅಭಿವೃದ್ಧಿ ಕಾರ್ಯ ಮುಂತಾದ ಕ್ಷೇತ್ರಗಳಲ್ಲಿ ಜನರ ಭಾಗವಹಿಸುವಿಕೆ ಏನೇನೂ ಸಾಲದೆಂಬ ತಿಳಿವಳಿಕೆ ಇಂದು ಮರೆಯಾಗಿದೆ.

ಪ್ರಜಾಪ್ರಭುತ್ವ, ವಿಕೇಂದ್ರೀಕರಣ, ವಿಕಾಸ—ಇವು ಒಂದನ್ನೊಂದು ಕೈಹಿಡಿದು ಮುಂದೊಯ್ಯುತ್ತವೆ. ಪ್ರಜಾತಂತ್ರಾತ್ಮಕ ಆಡಳಿತದ ವ್ಯವಹಾರಗಳನ್ನು ಅರಿತುಕೊಂಡು ಪರಿಣಾಮಕಾರಿಯಾಗಿ ಭಾಗವಹಿಸಬಹುದಾಗಿದ್ದ ತಳಮಟ್ಟದಲ್ಲಿ, ಎಂದರೆ ಗ್ರಾಮೀಣ ಜನಸಾಮಾನ್ಯರ ಮಟ್ಟದಲ್ಲಿ ಬೇರೂರಬೇಕಾದ ಸಾಂಸ್ಥಿಕ ಪ್ರಜಾಸತ್ತಾತ್ಮಕ ವ್ಯವಸ್ಥೆ ಅಲ್ಲಿಗೆ ಪ್ರಸರಿಸದೆ ಕೇವಲ ರಾಜ್ಯ ಮಟ್ಟಕ್ಕೆ ಸೀಮಿತವಾದಂದಿನಿಂದ ಈ ವಿಕೇಂದ್ರೀಕರಣ ಸಿದ್ಧಾಂತ ಶಿಥಿಲವಾಯಿತು.

ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಜನಸಾಮಾನ್ಯರ ಸಹಭಾಗಿತ್ವ ಅನಿವಾರ್ಯ ; ಅದಿಲ್ಲದೆ ಅಭಿವೃದ್ಧಿ ಅರ್ಥವಿಲ್ಲದ್ದಾಗಿ ಕುಂಠಿತಗೊಳುತ್ತದೆ—ಎಂದು ಅರಿತುಕೊಂಡಿದ್ದ ಮುಖಂಡರು ಪಂಚಾಯತಿ ರಾಜ್ಯ ಕಲ್ಪನೆಯನ್ನು ೧೯೫೭ರಲ್ಲಿ ಉಗಮಗೊಂಡಿದ್ದ ಸಮುದಾಯಾಭ್ಯುದಯ ಪ್ರಕ್ರಿಯೆಯಲ್ಲಿ ಅಳವಡಿಸಿದರು. ಸಮುದಾಯ ಅಭ್ಯುದಯದ ಯೋಗ್ಯಸಾಧನ ಇದೊಂದೇ ಎಂಬ ಇತ್ಯರ್ಥಕ್ಕೆ ಅವರು ಬಂದಿದ್ದರು. ಪಂಚಾಯತಿ ರಾಜ್ಯ ಸಿದ್ಧಾಂತದ ಪ್ರವರ್ತಕರಾದ ಬಲವಂತರಾಯ್ ಮೆಹ್ತಾ, ಜಯಪ್ರಕಾಶ್ ನಾರಾಯಣ್, ಪಂಡಿತ ಜವಹರಲಾಲ್ ನೆಹರು, ಎಸ್. ಕೆ. ಡೇ ಮುಂತಾದವರಲ್ಲಿ ಪಂಚಾಯತಿ ರಾಜ್ಯವನ್ನು ಕುರಿತು ಸಮಗ್ರ ಕಲ್ಪನೆಯಿತ್ತು. ೧೯೬೪ರ ಜನವರಿಯಲ್ಲಿ ಪಂಚಾಯತಿ ರಾಜ್ಯ ಕುರಿತು ನಡೆದ ವಿಚಾರಗೋಷ್ಠಿಯೊಂದರಲ್ಲಿ (ಈ ದಿಶೆಯ ಮೊದಮೊದಲ ಗೋಷ್ಠಿಗಳಲ್ಲೊಂದು ಅದು) ಜಯಪ್ರಕಾಶ ನಾರಾಯಣರು ತಮ್ಮ ವಿಚಾರವನ್ನು ಈ ರೀತಿ ಮಂಡಿಸಿದರು :

"ಸ್ಥೂಲವಾಗಿ ಹೇಳುವುದಾದರೆ ಇದನ್ನು ಕುರಿತು ಎರಡು ವಿರುದ್ಧವಾದ ಅಥವಾ ವಿಮುಖವಾದ ಅಭಿಪ್ರಾಯಗಳಿವೆ. ಈ ಎರಡು ಅಭಿಪ್ರಾಯಗಳ ವಿವಿಧ ಸಮ್ಮಿಶ್ರಣಗಳೂ ಹಲವಿವೆ. ಪಂಚಾಯತಿ ರಾಜ್ಯದ ಸಂಸ್ಥೆಗಳಾದ ಗ್ರಾಮ ಪಂಚಾಯತಿಗಳು, ಪಂಚಾಯತಿ ಸಮಿತಿಗಳು ಹಾಗೂ ಜಿಲ್ಲಾ ಪರಿಷತ್ತುಗಳು ರಾಜ್ಯ ಸರಕಾರದ ಅಂಗಾಂಗಗಳು ಹಾಗೂ ಸಿಬ್ಬಂದಿ ಮಾತ್ರ-ಎಂಬುದು ಒಂದು ಅಭಿಪ್ರಾಯ. ಮತ್ತೊಂದು ಅಭಿಪ್ರಾಯ, ಈ ಸಂಸ್ಥೆಗಳು ಪ್ರಾಥಮಿಕವಾಗಿ ಅವುಗಳ ಮಟ್ಟದಲ್ಲಿ ಸರಕಾರಗಳೇ, ಅನಂತರ ಪರಂಪರಯಾ ಅವು ರಾಜ್ಯ ಸರಕಾರದ ಅಂಗಗಳೂ ಆಗುತ್ತವೆ-ಎಂಬುದು. ಮೊದಲನೆಯದನ್ನು ನಾನು ಸಂಪೂರ್ಣವಾಗಿ ತಿರಸ್ಕರಿಸುತ್ತೇನೆ. ಎರಡನೆಯ ಅಭಿಪ್ರಾಯವೇ ಸರಿಯಾದದ್ದು ಎಂಬುದು ನನ್ನ ಅಭಿಪ್ರಾಯ. ಈ ವೈಚಾರಿಕ ಗೊಂದಲವನ್ನು ಶಾಶ್ವತವಾಗಿ ಪರಿಹರಿಸುವ ಕೆಲಸ ಮಾಡಿದರೆ ಈ ಗೋಷ್ಠಿಯಿಂದ ಒಂದು ಉತ್ತಮ ಕೆಲಸ ನೆರವೇರಿದಂತೆ ಆಯಿತೆಂದು ಭಾವಿಸುತ್ತೇನೆ. ಪಂಚಾಯತಿ ರಾಜ್ಯಗಳನ್ನು ಕೇವಲ ರಾಜ್ಯ ಸರ್ಕಾರದ ಅಂಗಗಳೆಂದು ಭಾವಿಸಿ ಹೊಸ ಸಿಬ್ಬಂದಿಯನ್ನು ಹುಟ್ಟುಹಾಕುವ ದೃಷ್ಟಿಯಿಂದ ಮಾತ್ರ ಪಂಚಾಯತಿ ರಾಜ್ಯವನ್ನು ಅಳವಡಿಸಲು ಇಷ್ಟೊಂದು ಹಣ ಹಾಗೂ ಶ್ರಮಗಳನ್ನು ಸುರಿದಿದ್ದರೆ ಅದೊಂದು ಮೂರ್ಖತನದ ಹಾಗೂ ವ್ಯರ್ಥಶ್ರಮದ ಕೆಲಸ ಎಂದು ನನ್ನ ಅಭಿಪ್ರಾಯ. ಅಪೇಕ್ಷೆ ಇಷ್ಟೇ ಇದ್ದಿದ್ದರೆ ಇದಕ್ಕಿಂತಲೂ ಉತ್ತಮವಾದ, ಪರಿಣಾಮಕಾರಿಯಾದ ಹಾಗೂ ಅಲ್ಪವೆಚ್ಚದ ಅಂಗಗಳನ್ನು ಹುಟ್ಟುಹಾಕಬಹುದಿತ್ತು."

## ೪. ಪ್ರಚಲಿತ ಮಸೂದೆ : ಕೆಲವು ಅನಿಸಿಕೆಗಳು

ಕರ್ನಾಟಕ ಶಾಸನ ಸಭೆಯ ಮುಂದಿರುವ ೧೯೮೩ರ ಜಿಲ್ಲಾ ಪರಿಷತ್, ಮಂಡಲ ಪಂಚಾಯತಿ ಹಾಗೂ ನ್ಯಾಯ ಪಂಚಾಯತಿಗಳ ಮಸೂದೆಯ ಮೇಲೊಂದು ಸ್ಥೂಲ ನೋಟ ಹರಿಸಿದಾಗ ಕಂಡುಬರುವ ಅಂಶವೆಂದರೆ, ಇದು ಮೂಲಭೂತವಾಗಿ ಈ ಹಿಂದಿನ ಪಂಚಾಯತ, ಪಂಚಾಯತ ಸಮಿತಿ, ಜಿಲ್ಲಾ ಮಂಡಳಿಗಳ ಕುರಿತ ಕಾನೂನುಗಳು ಹಾಗೂ ಜಿಲ್ಲಾ ಅಭಿವೃದ್ಧಿ ಮಂಡಳಿಗಳ ಕಾಯಿದೆಗಳಿಂದ ಆಯ್ದ ಕೆಲವು ನಿಯಮಗಳ ಅಳವಡಿಕೆಯಾಗಿದೆ, ಅಷ್ಟೆ. ಮಸೂದೆಯನ್ನು ಗಮನಿಸಿದಾಗ ಥಟ್ಟನೆ ತೋರಿಬರುವ ಕೆಲವು ಸಂಗತಿಗಳೆಂದರೆ : (೧) ಮಸೂದೆ ಅತಿ ದೀರ್ಘವಾಗಿದೆ. (೨) ಮಸೂದೆಯು ಆಡಳಿತ ದೃಷ್ಟಿಯನ್ನು ಪ್ರಧಾನವಾಗಿ ಹೊಂದಿದ್ದು, ಕಾನೂನಿನ ಜಾಲವಾಗಿದೆ. (೩) ಜಿಲ್ಲಾಧಿಕಾರಿ (ಡೆಪ್ಯುಟಿ ಕಮಿಷನರ್) ಗಳಿಗೆ ವಿಪರೀತ ಅಧಿಕಾರ ಒದಗಿಸುತ್ತದೆ. (೪) ಗ್ರಾಮೀಣರ ಬುದ್ಧಿಸಾಮರ್ಥ್ಯಕ್ಕೆ ಮೀರಿದ ಕಾರ್ಯಾಚರಣೆಗಳನ್ನು ಪಂಚಾಯತ ಮಂಡಲಗಳಿಗೆ ವಿಧಿಸಲಾಗಿದೆ ; ಆ ಪರಿವ್ಯಾಪ್ತಿಯಲ್ಲಿ ಬರುವ ಜನರ ಸಾಮರ್ಥ್ಯ ಹಾಗೂ ಸಂಪನ್ಮೂಲಗಳಿಗೆ ಮೀರಿದ ಕಾರ್ಯಾಚರಣೆಯನ್ನು ಮಂಡಲ ಪಂಚಾಯತಿಗಳಿಗೆ ವಹಿಸಿಕೊಡಲಾಗಿದೆ.

ಕರ್ನಾಟಕ ಮಸೂದೆಯ ಒಳಹೊಕ್ಕು ನೋಡಿದಾಗ ಪಂಚಾಯತಿ ರಾಜ್ಯ ಎಂದರೆ ಅದೊಂದು ಸರಕಾರದ ಅಂಗ ಹಾಗೂ ಪ್ರತಿನಿಧಿ ಎಂಬ ಕಲ್ಪನೆಯೇ ಬರುತ್ತದೆ. ರಾಜ್ಯದ ತಳಪಟ್ಟದಲ್ಲಿನ ಪ್ರಜಾತಂತ್ರ ವ್ಯವಸ್ಥೆಯನ್ನು ಸುಧಾರಿಸುವ ಉದ್ದೇಶವನ್ನು ಮಸೂದೆ ಎಲ್ಲೂ ವ್ಯಕ್ತಪಡಿಸುವುದಿಲ್ಲ. ಪ್ರಸ್ತುತ ಮಸೂದೆಯ ಆವಶ್ಯಕತೆ ಈಗ ಏನಿತ್ತು ?—ಎಂಬ ಪ್ರಶ್ನೆಗೆ ಸಮಾಧಾನ ದೊರೆಯುವುದೇ ಇಲ್ಲ. ೧೯೫೯ ರಲ್ಲಿ ಪಂಚಾಯತಿ ವ್ಯವಸ್ಥೆಯನ್ನು ಜಾರಿಗೆ ತಂದ ಲಾಗಾಯಿತು ರಾಜ್ಯದ ತಳಪಟ್ಟದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಯಾವ ರೀತಿ ಕೆಲಸ ಮಾಡುತ್ತಿದೆ—ಎಂಬುದರ ವಿಶ್ಲೇಷಣೆಯನ್ನೇ ನಡೆಸದೆ ಪ್ರಚಲಿತ ಮಸೂದೆಯ ನಿಯಮ, ನಿಬಂಧನೆಗಳನ್ನು ರಚಿಸಲಾಗಿದೆ. ಉದಾಹರಣೆಗೆ, ಈಗಿರುವ ಮೂರು ಮಜಲಿನ (three-tier) ವ್ಯವಸ್ಥೆಯನ್ನು [ಗ್ರಾಮ, ತಾಲ್ಲೂಕು, ಜಿಲ್ಲೆ], ಎರಡು ಮಜಲಿಗೆ (two-tier) [ಮಂಡಲ, ಜಿಲ್ಲೆ] ಬದಲಾಯಿಸುವ ಅಪೇಕ್ಷೆಯನ್ನು ವ್ಯಕ್ತಪಡಿಸಿದೆ. ಆದರೆ ಈ ಬದಲಾವಣೆಯ ಆವಶ್ಯಕತೆಯೇನು ?—ಎಂಬುದರ ಕುರಿತು ಸಮಾಧಾನ ದೊರೆಯುವುದಿಲ್ಲ.

ಈ ಸ್ವರೂಪಾತ್ಮಕ ಬದಲಾವಣೆಯನ್ನು ಮಾಡಲು ಸಾಕಷ್ಟು ಭೂಮಿಕೆ ಅಥವಾ ಕಾರಣ ಇದೆಯೆ ? ಅಧಿಕಾರವರ್ಗವಾಗಲಿ ಪರಿಣತರಾಗಲಿ ಯಾರೂ ಕೂಡ ಇಂಥ ಬದಲಾವಣೆಯ ಋಜುತ್ವವನ್ನು ಸಮರ್ಥಿಸುವ ಪ್ರಯತ್ನಕ್ಕೆ ಕೈಹಾಕಿಲ್ಲ. ಈ ಕುರಿತು ಅಧ್ಯಯನ ನಡೆಸಿರುವ ಕೆಲವರೂ ಬದಲಾವಣೆಯ ಆವಶ್ಯಕತೆಯನ್ನು ಕಂಡಿದ್ದಾರಾದರೂ ಅವರಿಗೆ ವ್ಯವಸ್ಥೆಯ ಸ್ವರೂಪದಲ್ಲೇ ದೋಷವೇನೂ ಕಂಡಿಲ್ಲ; ವ್ಯವಸ್ಥೆಯ ವಿಫಲತೆಗೆ ಬೇರೆಯೇ ಕಾರಣಗಳಿವೆ ಎಂದು ಅವರು ನಿಶ್ಚಯಿಸಿದ್ದಾರೆ.

ಒಂದು ವ್ಯವಸ್ಥೆಯನ್ನು ಇನ್ನೊಂದಕ್ಕೆ ಬದಲಾಯಿಸಿದರೆ—ಬದಲಾವಣೆಗೋಸ್ಕರವಷ್ಟೇ ಬದಲಾವಣೆ — ಹೊಸ ಸಂಘಟನೆಯು ಪರಿಣಾಮಕಾರಿಯಾಗಿ ಕಾರ್ಯಗತವಾಗಿಬಿಡುತ್ತದೆ — ಎಂಬ ಭ್ರಮೆ ಪ್ರಚಲಿತವಾಗಿದೆ. ವ್ಯವಸ್ಥೆಯಲ್ಲಿರುವ ದೋಷವೇನು ? ವಿಫಲತೆಗೆ ಕಾರಣವೇನು ?—ಎಂಬುವನ್ನು ವಿಶ್ಲೇಷಿಸುವ ಗೊಡವೆಗೆ ಯಾರೊಬ್ಬರೂ ಹೋದಂತಿಲ್ಲ.

ಈಗ ರೂಪಿಸಲಾದ ಹೊಸ ವ್ಯವಸ್ಥೆ ಮೊದಲಿನವಕ್ಕಿಂತ ಹೆಚ್ಚು ಪರಿಣಾಮಕಾರಿಯಾಗುತ್ತದೆ ಎಂಬುದರ ಬಗ್ಗೆ ಯಾವ ಭರವಸೆಯೂ ಇಲ್ಲ. ಪ್ರಚಲಿತ ಮಸೂದೆಯು ಹಳೆಯ ವಿವಿಧ ನಿಯಮಗಳ ಒಂದು ಗೊಂದಲಮಯ ಮಿಶ್ರಣವೇ ಹೊರತು ವಿವೇಚನಾಪೂರ್ವಕವಾದ ಪರ್ಯಾಯ ವ್ಯವಸ್ಥೆಯಲ್ಲ—ಎಂಬುದು ಮಸೂದೆಯನ್ನು ಓದಿದವರಿಗೆಲ್ಲ ಮನವರಿಕೆಯಾಗುತ್ತದೆ.

ಅಲ್ಲದೆ ಉದ್ದಿಷ್ಟ ವ್ಯವಸ್ಥೆಯಲ್ಲಿ ವಿಕೇಂದ್ರೀಕರಣವು ಮಂಡಲದ—ಎಂದರೆ ೨೦,೦೦೦ ಜನಸಮೂಹದ — ಮಟ್ಟಕ್ಕೇ ನಿಂತುಬಿಡುತ್ತದೆ. ಗ್ರಾಮವು ಆಡಳಿತದ

ಒಂದು ಅಂಗವಾಗಿ ಪರಿಗಣಿತವಾಗಿಲ್ಲ. ಹಳ್ಳಿಯೂ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ವ್ಯವಸ್ಥೆಯ ಒಂದು ಅವಿಭಾಜ್ಯ ಅಂಗ ಎಂಬುದನ್ನು ಹೊಸ ಧೋರಣೆ ಅಲಕ್ಷಿಸಿದೆ. ಗಾಂಧಿಜೀಯವರ ಗ್ರಾಮ ಸ್ವರಾಜ್ಯ ಕಲ್ಪನೆಗೆ ಕೊನೆಯ ನಮಸ್ಕಾರ ಹೇಳಿದಂತಾಗಿದೆ ಇದು.

ಸುಧಾರಣೆ ಎಷ್ಟೇ ಅರ್ಥಪೂರ್ಣವಾಗಿರಬಹುದು, ಆದರೆ ಕೇಂದ್ರ ಅಥವಾ ರಾಜ್ಯ ಸರ್ಕಾರಗಳ ಮಟ್ಟದಲ್ಲಿನ ಮೂಲಭೂತ ತತ್ತ್ವಗಳೇ ಗ್ರಾಮಮಟ್ಟಕ್ಕೂ ಅನ್ವಯ ವಾಗಬೇಕು. ಎಂದರೆ, ಮುಖ್ಯವಾಗಿ, ರಾಜಕೀಯ ನಾಯಕತ್ವಕ್ಕೆ ಅಧಿಕಾರಶಾಹಿಯು ಅಧೀನವಾಗಿರುವಂತಹ ಪ್ರಜಾತಂತ್ರಾತ್ಮಕ ವ್ಯವಸ್ಥೆ ಜಾರಿಗೆ ಬರಬೇಕು. ಸ್ಥಳೀಯ ಸ್ವಯಂ–ಸರಕಾರದ್ದೇ (self-government) ಒಂದು ವ್ಯವಸ್ಥೆ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳದ್ದು ಇನ್ನೊಂದು ವ್ಯವಸ್ಥೆ–ಹೀಗಿರುವ ಇಬ್ಬಗೆಯ ಆಡಳಿತ ಸಂಸ್ಕೃತಿ ತಾರ್ಕಿಕವಾದದ್ದೂ ಅಲ್ಲ, ಸಮರ್ಥನೀಯವೂ ಆಗಿಲ್ಲ. ಈ ದೃಷ್ಟಿಯಿಂದ ಕರ್ನಾಟಕದ ಈಗಿನ ಮಸೂದೆ ಪ್ರಗತಿಪರವಾಗಿದೆ. ಅಧಿಕಾರಶಾಹಿಯು ರಾಜಕೀಯ ಮುಖಂಡರಿಗೆ ಅಧೀನವಾಗಿರುವಂಥ ಸ್ಥಿತಿ ತರುವಲ್ಲಿ ಅದು ಭಾಗಶಃ ಯಶಸ್ವಿಯಾಗಿದೆ. ಆದರೆ ಈ ಕಲ್ಪನೆಯನ್ನು ಮಸೂದೆ ಸಾಕಷ್ಟು ದೂರ ಒಯ್ಯದೆ, ಅದರಲ್ಲಿ ಅಹಿತವೆನಿಸುವಷ್ಟರ ಮಟ್ಟಿಗೆ ಸುರಕ್ಷತೆಯ ನಿಷೇಧಾತ್ಮಕ ಕಲಮುಗಳನ್ನು ಸೇರಿಸುವುದರ ಮೂಲಕ ಜನಗಳ ಬುದ್ಧಿವಂತಿಕೆಯಲ್ಲೇ ಸಂಶಯ ಹಾಗೂ ಅಪನಂಬಿಕೆಗಳನ್ನು ವ್ಯಕ್ತಪಡಿಸಿ ಪ್ರಜಾತಂತ್ರಾತ್ಮಕ ಅಂಶವನ್ನು ಮೂಲೆಗೊತ್ತಿದೆ.

ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚು ಅಧಿಕಾರ ಹಾಗೂ ಕಾರ್ಯಗಳನ್ನು ಕೊಡಲು ನಿರ್ಣಯಿಸಲಾಗಿದೆ. ಆದ್ದರಿಂದ ಮಂಡಲ ಪಂಚಾಯತಿಗಳ ಸಂಪನ್ಮೂಲಾಧಾರವನ್ನು ಬಲಗೊಳಿಸುವುದು ಅವಶ್ಯ.

ವ್ಯವಸ್ಥೆ ಹಾಗೂ ಕಾರ್ಯಾಚರಣೆಗಳ ದೃಷ್ಟಿಯಿಂದ ನೋಡಿದಾಗ ಈಗಿರುವ ಮೂರು ಮಜಲುಗಳ ವ್ಯವಸ್ಥೆಯೇ ಉತ್ತಮ ಎನಿಸುತ್ತದೆ. ಪ್ರಚಲಿತ ಮಸೂದೆ ಮುಂದಿಟ್ಟಿರುವ ಎರಡು ಮಜಲಿನ ವ್ಯವಸ್ಥೆಯು ಒಂದು ಗ್ರಾಮಸಮೂಹವನ್ನು ಆಡಳಿತದ ಒಂದು ಅಂಗವಾಗಿ ಪರಿಗಣಿಸುತ್ತದೆ. ಇಂಥ ಗ್ರಾಮಸಮೂಹವು ಸೀಮಿತ ಸ್ಥಳೀಯ ಕಾರ್ಯಾಚರಣೆಯ ದೃಷ್ಟಿಯಿಂದ ಅತ್ಯಂತ ಗಾತ್ರದ್ದಾಗುತ್ತದೆ, ಹಾಗೂ ಜಿಲ್ಲೆಯಿಂದ ಹರಿದುಬರುವ ಅಧಿಕಾರ ಹಾಗೂ ಕಾರ್ಯಾಚರಣೆಗಳ ದೃಷ್ಟಿಯಿಂದ ತುಂಬ ಚಿಕ್ಕದಾಗುತ್ತದೆ. ಸ್ಪಷ್ಟವಾಗಿ ಹೇಳುವುದಾದರೆ, ಮಂಡಲ ಪಂಚಾಯತವು, ಮಸೂದೆ ಅದಕ್ಕೆ ವಹಿಸಿರುವ ಕಾರ್ಯಾಚರಣೆಯ ದೃಷ್ಟಿಯಿಂದ ತುಂಬ ದೊಡ್ಡದು, ಆದರೆ ಈ ಮೊದಲು ತಾಲೂಕಾಭಿವೃದ್ಧಿ ಮಂಡಳಿಗಳು ನಿರ್ವಹಿಸುತ್ತಿದ್ದ ಕಾರ್ಯಾಚರಣೆಗಳ ದೃಷ್ಟಿಯಿಂದ ತುಂಬ ಚಿಕ್ಕದು. ಹೀಗೆ ಇಬ್ಬಂದಿ ಪರಿಸ್ಥಿತಿ ಏರ್ಪಡಲಿದೆ.

01385
COMMUNITY HEALTH CELL
47/1, (First Floor) St. Marks Road
BANGALORE - 560 001

## ೫. ಕೆಲವು ಕೊರತೆಗಳು

ಇನ್ನು ಕೆಲವು ಗಮನಿಸಬೇಕಾದ ಸಂಗತಿಗಳು ಇವು :

೧) ಸಂಪನ್ಮೂಲಾಧಾರ ತುಂಬ ಸಂಕುಚಿತವಾದ್ದಾಗಿದೆ. ತೆರಿಗೆಯ ಬಾಬುಗಳು ಕಡಿಮೆಯಿವೆ. ತೆರಿಗೆ ಎತ್ತುವ ಅಧಿಕಾರ ತುಂಬ ಸೀಮಿತವಾಗಿದೆ. ತೆರಿಗೆಯ ಬಾಬುಗಳು ಅನಿಶ್ಚಿತವಾಗಿವೆ. ಇದರ ಪರಿಣಾಮವಾಗಿ, ಕಲ್ಪನೆಯಲ್ಲಿ ಮಂಡಲ ಪಂಚಾಯತಿಗಳು ಆಕಾಶದವರೆಗೆ ಏರಬಹುದು, ಆದರೆ ನೆಲದಲ್ಲಿ ಕಾಲೂರಲು ಅವುಗಳಿಗೆ ಒಂದಿಷ್ಟು ಸ್ಥಳವಿಲ್ಲವಾಗಿದೆ.

೨) ಚುನಾವಣೆ, ಮೇಲ್ಮನವಿ ಮುಂತಾದವುಗಳಿಗೆ ಸಂಬಂಧಿಸಿದಂತೆ ಕಲಮುಗಳು ಅತಿಯಾಗಿವೆ. ಅವು ತೀರ ಸಾಂಪ್ರದಾಯಿಕವೂ ಹಾಗೂ ನಿಷೇಧಾತ್ಮಕವೂ ಆಗಿವೆ.

೩) ಜಿಲ್ಲಾ ಪರಿಷತ್ತುಗಳ ಮೇಲೆ ವಿಪರೀತ ಕಾರ್ಯಭಾರವನ್ನು ಹೇರಲಾಗಿದೆ. ರಾಜ್ಯದ ಬಹುತೇಕ ಎಲ್ಲ ಕಾರ್ಯಾಚರಣೆಗಳನ್ನೂ (ಬೃಹತ್ ಬಂಡವಾಳ ಹೂಡುವಿಕೆ, ಅಂತರ್ ಜಿಲ್ಲಾ ಯೋಜನೆಗಳನ್ನು ಹೊರತುಪಡಿಸಿ) ಹೊರಿಸಲಾಗಿದೆ ಎಂದೆನಿಸುತ್ತದೆ. ಆದರೆ ಜಿಲ್ಲಾ ಪರಿಷತ್ತುಗಳ ಕಾರ್ಯಾಚರಣೆ ಹಾಗೂ ಜಿಲ್ಲೆಯಲ್ಲಿರುವ ಸರಕಾರೀ ಇಲಾಖೆಗಳ ಕಾರ್ಯಾಚರಣೆಗಳ ನಡುವಣ ಸಂಬಂಧವನ್ನು ಸ್ಪಷ್ಟವಾಗಿ ತಿಳಿಸಿಲ್ಲ. ಇದರಿಂದಾಗಿ ಬೇಜವಾಬ್ದಾರಿತನ ಹಾಗೂ ಕೆಲಸಗಳ ಪುನರಾವರ್ತನೆಗಳು ಆಗುವ ಸಂಭವವಿದೆ.

೪) ಜಿಲ್ಲಾ ಪರಿಷತ್ತುಗಳ ಕಾರ್ಯಾಚರಣೆ ಪರಿಣಾಮಕಾರಿಯಾಗಬೇಕಾದರೆ, ಸರಕಾರಿ ಇಲಾಖೆಗಳು ಹಾಗೂ ವಿಭಾಗಗಳು ಅವಕ್ಕೆ ಅಧೀನವಾಗಿ ತಮ್ಮ ಕಾರ್ಯಾಚರಣೆ ನಡೆಸುವಂತಾಗಬೇಕಾದ್ದು ಅನಿವಾರ್ಯ. ಒಂದೇ ಕೆಲಸವನ್ನು ಹಲವು ಅಂಗಗಳು ಪುನರಾವರ್ತಿಸುವುದನ್ನು ತಪ್ಪಿಸಿ ಸಮಗ್ರ ಕ್ಷೇತ್ರಾಭಿವೃದ್ಧಿಯ ಉದ್ದೇಶವನ್ನೂ ಇದರಿಂದಾಗಿ ಸಾಧಿಸಬಹುದಾಗಿದೆ.

೫) ಜಿಲ್ಲಾ ಪರಿಷತ್ತಿನ ಸದಸ್ಯನೊಬ್ಬ ತಪ್ಪು ಮಾಡಿದರೆ ಅವನ ಮೇಲೆ ಶಿಸ್ತಿನ ಕ್ರಮ ಕೈಕೊಳ್ಳುವ ಅಧಿಕಾರವನ್ನು ಮಸೂದೆಯಲ್ಲಿ ಜಿಲ್ಲಾಧೀಶರಿಗೆ ಕೊಡಲಾಗಿದೆ. ಈ ಸಂಬಂಧದಲ್ಲಿ ಜಿಲ್ಲಾ ಪರಿಷತ್ತಿನ ಅಧ್ಯಕ್ಷರ ಪಾತ್ರವೇನೆಂಬುದನ್ನು ಉಲ್ಲೇಖಿಸಿಯೇ ಇಲ್ಲ. ಜಿಲ್ಲಾ ಪರಿಷತ್ತು ವಿಧಾನಸಭೆಯಂತೆ ಸ್ವಯಂಪೂರ್ಣವಾಗಿರಬೇಕು. ಸರಕಾರ ಹಾಗೂ ಅದರ ವಿವಿಧಾಂಗಗಳು ತಮ್ಮ ಮನಬಂದಂತೆ ನಡೆದು ಅನಂತರ ತಮ ಆಚರಣೆಗೆ ಜಿಲ್ಲಾಧಿಕಾರಿಗಳಿಂದ ಮನ್ನಣೆ ದಾಖಲೆ ಮಾಡಿಸುವ ಪರಿಪಾಠ ಹೊಸದೇನಲ್ಲ,

೬) ಮಂಡಲ ಪಂಚಾಯತಿಗಳಂತೆ ಜಿಲ್ಲಾ ಪರಿಷತ್ತುಗಳಿಗೂ ಅಪಾರ ಕಾರ್ಯಭಾರಗಳ ಹೊರೆಯಿದ್ದು, ವಹಿಸಿಕೊಟ್ಟ ಕರ್ತವ್ಯಗಳನ್ನೆಲ್ಲ ಅವು ನಿರ್ವಹಿಸುವಷ್ಟು ಸಂಪನ್ಮೂಲಗಳನ್ನು ಕೊಡಮಾಡಿಲ್ಲ.

೭) ಜಿಲ್ಲಾ ಶಾಸಕರಿಗೆ ಪರಿಷತ್ತಿನ ಕಲಾಪಗಳಲ್ಲಿ ಭಾಗವಹಿಸುವ ಮತ್ತು ಮತದಾನ ಮಾಡುವ ಹಕ್ಕನ್ನು ಕೊಟ್ಟಿರುವುದರಿಂದ ಇಡೀ ವ್ಯವಸ್ಥೆಯೇ ಏರುಪೇರಾಗುವ ಸಂಭವವಿದೆ.

೮) ಜಿಲ್ಲಾ ಪರಿಷತ್ತುಗಳು ಶೈಕ್ಷಣಿಕ, ವೈದ್ಯಕೀಯ ಹಾಗೂ ಕೃಷಿ ಶಾಲೆಗಳನ್ನು ನಡೆಸುವುದಕ್ಕೆ ಸಂಬಂಧಿಸಿದಂತೆ ವಿವರಗಳು ಅಸ್ಪಷ್ಟವಾಗಿವೆ. ಅವುಗಳಿಗೆ ಪಠ್ಯಪುಸ್ತಕಗಳನ್ನು ಸಿದ್ಧಪಡಿಸುವ ಹಾಗೂ ಪಠ್ಯವನ್ನು ಸೂಚಿಸುವ ಅಧಿಕಾರವಿದ್ದಂತಿಲ್ಲ. ಇವುಗಳನ್ನು ಮಾಡುವವರು ಯಾರು ?

೯) ವಾಹನಗಳ ಓಡಾಟವನ್ನೂ ಜಿಲ್ಲಾ ಪರಿಷತ್ತುಗಳು ನಿಯಂತ್ರಿಸಬೇಕೆಂದು ಮಸೂದೆಯಲ್ಲಿದೆ. ಆದರೆ ಇದು ಈಗ ಅಸ್ತಿತ್ವದಲ್ಲಿರುವ ಪ್ರಾದೇಶಿಕ ಸಾಗಾಣಿಕೆ ಅಧಿಕಾರಿ ಕಾರ್ಯಾಲಯಗಳೊಂದಿಗೆ ಯಾವ ರೀತಿ ಹೊಂದಾಣಿಕೆಯಾಗುತ್ತದೆ ? ಈ ಬಗೆಯ ಅಸ್ಪಷ್ಟತೆಗಳು ಮಸೂದೆಯಿಡೀ ಕಾಣಸಿಗುತ್ತವೆ. ಕೆಲಗೆಯ ಪುನರಾವೃತ್ತಿಯ ಸಂಭವವೂ ಇದೆ.

೧೦) ನ್ಯಾಯ ಪಂಚಾಯತಿ ತಾತ್ತ್ವಿಕವಾಗಿ ಒಪ್ಪಿಯನೆನಿಸುತ್ತದೆ. ಆದರೆ ಹೊಸ ಹೊಸ ಸಮಸ್ಯೆಗಳ ಹಾಗೂ ವ್ಯಾಜ್ಯಗಳ ಉದ್ಭವದಿಂದಾಗಿ ಅದರ ಕಾರ್ಯಾಚರಣೆ ಜಟಿಲವಾಗಿ ಪರಿಣಮಿಸಬಹುದು. ಗ್ರಾಮ ಪಂಚಾಯತಿಗಳ ಸ್ವರೂಪ, ಸಂವಿಧಾನ, ವ್ಯಾಪ್ತಿ ಹಾಗೂ ಅಧಿಕಾರಗಳ ರಚನೆಯ ಸಂದರ್ಭದಲ್ಲಿ ನ್ಯಾಯಾಂಗ ವಿಕೇಂದ್ರೀಕರಣವೂ ಶಾಸಕಾಂಗ–ಕಾರ್ಯಾಂಗ ಸಂಬಂಧದ ಪುನರ್ಘಟನೆಯೂ ಅಳತೆ ತಪ್ಪಿ ಮುಂದೆ ಹೋಗಿದೆಯೆನಿಸುತ್ತದೆ. ಇವುಗಳ ಸಂಯೋಜನೆಯಿಂದಾಗಿ ಮಂಡಲ ಪಂಚಾಯತಿಗಳೂ ಸುಶಯುಕ್ತೀಡಾಗಿ ಜನರ ವಿಶ್ವಾಸವನ್ನು ಕಳೆದುಕೊಂಡಾವು, ಮತ್ತು ನಿರೀಕ್ಷಿಸಿದ ಪರಿಣಾಮವನ್ನು ಉಂಟುಮಾಡದೆ ಇರಬಹುದು.

೧೧) ಮಸೂದೆಯಲ್ಲಿನ ಅವಕಾಶಗಳು ಪಟ್ಟಭದ್ರ ಹಿತಾಸಕ್ತಿಗಳನ್ನು ಪ್ರೋತ್ಸಾಹಿಸುವ ಸಂಭವವಿದೆ.

೧೨) ನ್ಯಾಯ ಪಂಚಾಯತ ಸದಸ್ಯತ್ವಕ್ಕೆ ಸೂಚಿಸಿರುವ ಅರ್ಹತೆಗಳು ಆ ಕೆಲಸಕ್ಕೆ ಬೇಕಾದ ಆವಶ್ಯಕ ಅರ್ಹತೆಗಳಿಗೆ ತಕ್ಕುದಾಗಿಲ್ಲ. 'ನೈಸರ್ಗಿಕ ನ್ಯಾಯ' ದೊರಕಿಸಲು ನ್ಯಾಯಪೀಠದಲ್ಲಿ ಇರಬೇಕಾದ ವ್ಯಕ್ತಿಯ ಯೋಗ್ಯತೆ ಪೂರ್ಣ ಬೇರೆಯೇ ಇದೆ.

ಪ್ರಚಲಿತ ಮಸೂದೆಯಲ್ಲಿ ಧ್ವನಿತವಾಗಿರುವ ಯೋಗ್ಯತೆ ಸಮಾಧಾನಕರ ಫಲ ನೀಡಲಾರದು. ಹೊಸ ವ್ಯವಸ್ಥೆಯಲ್ಲಿ ಅತಿ ಮುಖ್ಯ ಪಾತ್ರ ವಹಿಸಲಿರುವ ನ್ಯಾಯ ಪಂಚಾಯತಗಳ ಸದಸ್ಯತ್ವದ ಅರ್ಹತೆಗಳನ್ನು ವಯಸ್ಸು, ನ್ಯಾಯಾಂಗ ಅನುಭವ ಹಾಗೂ ನೈತಿಕ ಯೋಗ್ಯತೆಗಳನ್ನು ಆಧರಿಸಿ ನಿಶ್ಚಯಿಸಬೇಕು. ಪ್ರಚಲಿತ ಮಸೂದೆಯಲ್ಲಿ ಕೇವಲ ಅನರ್ಹತೆಗಳನ್ನು ಮಾತ್ರ ಉಲ್ಲೇಖಿಸಲಾಗಿದೆ.

೧೩) ನ್ಯಾಯಪಂಚಾಯತಿಗಳು ಬಗೆಹರಿಸಬೇಕಾದ ಅಪರಾಧಗಳ ಸ್ವರೂಪ ಹೇಳುವಲ್ಲಿ ವೈಯಕ್ತಿಕ ಪ್ರತೀಕಾರ, ಪಕ್ಷಪಾತಗಳಿಗೆ ಅವಕಾಶ ಲಭಿಸುವ ಸಂಭವ ಏರ್ಪಟ್ಟಿದೆ.

೧೪) ನ್ಯಾಯ ಪಂಚಾಯತಿಗಳು ನ್ಯಾಯಾಲಯಗಳ ಮೇಲಿರುವ ಭಾರವನ್ನು ಸಾಕಷ್ಟು ಮಟ್ಟಿಗೆ ಕಡಿಮೆಗೊಳಿಸಬಹುದೆಂಬುದೇನೋ ನಿಜ, ಆದರೆ ನ್ಯಾಯ ಪಂಚಾಯತದ ಸದಸ್ಯರು ಚುನಾಯಿತ ಪ್ರತಿನಿಧಿಗಳಾಗಿರುವುದರಿಂದ ಒಂದಿಲ್ಲೊಂದು ಗುಂಪಿಗೆ ಸೇರಿದವರಾಗಿರುತ್ತಾರೆ. ತಮ್ಮ ಕ್ಷೇತ್ರಗಳಲ್ಲಿನ ಜನರ ಅಪೇಕ್ಷೆಯನ್ನು ಮೀರಲಾರದಂಥವರಾಗಿರುತ್ತಾರೆ. ಆದ್ದರಿಂದ ನ್ಯಾಯ ಪಂಚಾಯತ ಸದಸ್ಯರು ಪಕ್ಷಪಾತದಿಂದ ನಿರ್ಣಯ ನೀಡಿ 'ನೈಸರ್ಗಿಕ ನ್ಯಾಯ'ದ ತತ್ತ್ವವನ್ನು ಗಾಳಿಗೆ ತೂರಬಹುದು—ಎಂದು ಸಂಶಯ ಬರುವುದು ಸಹಜವಾಗಿದೆ. ಇದರಿಂದಾಗಿ, ಮೊದಲೇ ಗುಂಪುಗಾರಿಕೆಯಲ್ಲಿ ಬೇಯುತ್ತಿರುವ ನಮ್ಮ ಹಳ್ಳಿಗಳ ಪರಿಸ್ಥಿತಿ ಇನ್ನಷ್ಟು ಹದಗೆಡುವ ಸಂಭವವಿದೆ.

೧೫) ನ್ಯಾಯ ಪಂಚಾಯತವು ನೀರಾವರಿ ಮೇಲ್ವಿಚಾರಣೆ, ಬೆಳೆಗಳ ಮಾದರಿ, ನೀರಿನ ದರ, 'ಬೆಟರ್‌ಮೆಂಟ್ ಲೆವಿ' ಮುಂತಾದವುಗಳ ಕುರಿತೂ ವ್ಯಾಜ್ಯಗಳನ್ನು ಬಗೆಹರಿಸಬೇಕಾಗುವುದು.

## ೬. ಸಂಗ್ರಹ ಸಮೀಕ್ಷೆ

೧) ಭಾರತದ ಈವರೆಗಿನ ರಾಜ್ಯಾಡಳಿತ ಕ್ರಮ ಹಾಗೂ ಪಂಚಾಯತಿ ರಾಜ್ಯದ ಅನುಭವಗಳಿಂದ ಸರಕಾರ ಹಾಗೂ ಅವರ ಪ್ರತಿನಿಧಿಗಳು ಕೆಲವು ಪಾಠಗಳನ್ನು ಕಲಿತುಕೊಳ್ಳಬೇಕಾಗಿದೆ. ಜನರು ತಪ್ಪುಗಳನ್ನೆಸಗಿದ್ದಾರೆ ಎಂಬುದು ನಿಜ. ಅವರ ಪರಿಣಾಮಕಾರಿ ಸಹಭಾಗಿತ್ವಕ್ಕೆ ಧಕ್ಕೆಯೊದಗಿಸಿರುವ ಸಂಗತಿಗಳಲ್ಲಿ ಮುಖ್ಯವಾದವುಗಳೆಂದರೆ—೧) ಅನುಭವದ ಕೊರತೆ, ೨) ಕಾರ್ಯವಿಧಾನದ ಜಟಿಲತೆ, ೩) ಸ್ವಸಾಮರ್ಥ್ಯದಲ್ಲಿ ಅಪನಂಬಿಕೆ, ೪) ಅಧಿಕಾರಾಂಗದ ಮಧ್ಯಪ್ರವೇಶ. ಜನರು ಸಹಭಾಗಿತ್ವವನ್ನು ಪರಿಣಾಮಕಾರಿಗೊಳಿಸಬೇಕೆಂದರೆ, ಅಧಿಕಾರಾಂಗದ ಅತಿನಿಯಂತ್ರಣ ಹಾಗೂ ಮೇಲ್ವಿಚಾರಣೆಗಳನ್ನು ಕಡಿಮೆಗೊಳಿಸಿ ತರಬೇತಿ, ಮಾರ್ಗದರ್ಶನ ಹಾಗೂ

ಮಾನ್ಯತೆಗಳನ್ನು ಹೆಚ್ಚಿಸಬೇಕು. ಸ್ಥಳೀಯ ಆಡಳಿತಾಂಗಗಳ ಮಧ್ಯದ ಸೌಹಾರ್ದ ವನ್ನು ಬೆಳೆಸಿ ಕೌಟುಂಬಿಕ ವಾತಾವರಣವನ್ನು ನಿರ್ಮಿಸಬೇಕು. ಪ್ರಚಲಿತ ಮಸೂದೆಯು ಹೆಚ್ಚಾಗಿ ನಿಯಂತ್ರಣಾಭಿಮುಖವಾಗಿದೆಯೇ ಹೊರತು ಜನರ ಸಹಭಾಗಿತ್ವಕ್ಕೆ ಹೆಚ್ಚಿನ ಪ್ರೋತ್ಸಾಹನ ನೀಡುವಂಥದಾಗಿಲ್ಲ.

೨) ದಂಡನೆ ಹಾಗೂ ನಿಯಂತ್ರಣಗಳ ಅಂಶವೇ ಅಧಿಕವಾಗಿದ್ದು, ಜನಕ್ಕೆ ಬೇಕಾದ ತರಬೇತಿ, ಮಾರ್ಗದರ್ಶನ ಹಾಗೂ ಸರಕಾರದ ವಿವಿಧಸ್ತರಗಳ ಪರಸ್ಪರ ಹೊಂದಾಣಿಕೆ ಒಂದೆ ಬದಿದ್ದಿವೆ. ಪ್ರಜಾತಾಂತ್ರಿಕ ಸಂಸ್ಥೆಗಳ ನಿಯಂತ್ರಣದಲ್ಲಿ ಅಧಿಕಾರಾಂಗದ್ದೇ ಮೇಲುಗೈಯಾಗಿದೆ.

೩) ಈ ತೆರವ ಅಧಿಕಾರಾಂಗವ ಅತಿಪ್ರವೇಶ ಪ್ರಜಾಪ್ರಭುತ್ವದ ಸಿದ್ಧಾಂತಕ್ಕೆ ವಿರುದ್ಧವಾದುದಾಗಿದೆ. ಜವಾಬ್ದಾರಿ, ಅಧಿಕಾರ ಹಾಗೂ ಸಂಪನ್ಮೂಲಗಳು ಒಂದಕ್ಕೊಂದು ಯಾವಾಗಲೂ ಗಾಢ ಸಂಬಂಧ ಹೊಂದಿರಬೇಕು. ಪಂಚಾಯತಿ ರಾಜ್ಯಕ್ಕೆ ಅದರ ಕಾರ್ಯಗಳನ್ನು ಸಫಲಗೊಳಿಸುವಲ್ಲಿ ಸಹಾಯ ಮಾಡಬೇಕು. ಅಧಿಕಾರ ವನ್ನು ಯಾವಾಗಲೂ ಸಂಸ್ಥೆಗಳಿಗೆ ವಹಿಸಬೇಕೇ ಹೊರತು ಅದು ವ್ಯಕ್ತಿಗಳಲ್ಲಿ ಕೇಂದ್ರೀ ಕೃತವಾಗಬಾರದು.

೪) ಒಂದೇ ಉದ್ದೇಶಕ್ಕೆ ಅನೇಕ ಅಧಿಕಾರಾಂಗಗಳನ್ನು ನೇಮಿಸುವುದು ಕಾರ್ಯಾ ಚರಣೆಯನ್ನೇ ದುರ್ಬಲಗೊಳಿಸುತ್ತದೆ. ಏಕಮಾರ್ಗ ನಿಯಂತ್ರಣ ಹಾಗೂ ಕಾರ್ಯಾ ಚರಣೆಯು ಅಪೇಕ್ಷಣೀಯ.

೫) ಸ್ಥಳೀಯ ಪ್ರಕರಣಗಳಲ್ಲಿ ಲೋಕಸಭೆ ಹಾಗೂ ವಿಧಾನಸಭೆಗಳ ಸದಸ್ಯರ ಮಧ್ಯಪ್ರವೇಶ ಸಂಗತವೂ ಅಲ್ಲ, ಅಪೇಕ್ಷಣೀಯವೂ ಅಲ್ಲ.

೬) ಮಸೂದೆಯು ಸದುದ್ದೇಶವನ್ನೇ ಹೊಂದಿದೆ. ಆದರೆ ಸೂಚಿಸಿದ ತಂತ್ರ, ಘೋಷಿತ ವಿಕೇಂದ್ರೀಕರಣದ ಉದ್ದೇಶಸಾಧನೆಯ ದೃಷ್ಟಿಯಿಂದ ಅಸಮರ್ಪಕವಾಗಿದೆ.

೭) ಅಭಿವೃದ್ಧಿ ಕಾರ್ಯಕ್ರಮಗಳ ಮೇಲ್ವಿಚಾರಣೆ ಹಾಗೂ ಆಯಾ ವರ್ಷದ ಕಾರ್ಯಕ್ರಮಗಳನ್ನು ನಿಶ್ಚಯಿಸುವುದಕ್ಕಾಗಿ ಗ್ರಾಮಸಭೆಗೆ ನೀಡಿದ ಅಧಿಕಾರ ಗಮನಾರ್ಹ. ಆದರೆ, ಅದಕ್ಕಾಗಿ ಒದಗಿಸಿರುವ ಅವಕಾಶ ಅನುಕೂಲಗಳು ಸಾಲದು.

೮) ಪ್ರತಿಯೊಂದು ಮಂಡಲ ಪಂಚಾಯತವೂ ೧೫ ರಿಂದ ೨೦ ಸಾವಿರ ಜನರನ್ನೊಳಗೊಂಡಿರುತ್ತದೆ. ಅದಕ್ಕೆ, ಅದರ ಕಾರ್ಯಾಚರಣೆಗಳನ್ನು ಸೂಚಿಸಿದ ಸಂದರ್ಭದಲ್ಲೇ, ಅದರ ಹಣಕಾಸಿನ ಮೂಲ ಹಾಗೂ ವ್ಯಾಪ್ತಿಗಳನ್ನೂ ಸೂಚಿಸ ಬೇಕು.

೯) ಮಂಡಲ ಪಂಚಾಯತಿಯ ಅಧ್ಯಕ್ಷನ, ಉಪಾಧ್ಯಕ್ಷನ ಮೇಲೆ ಕ್ರಮ ಕೈಕೊಳ್ಳುವ ಅಧಿಕಾರವನ್ನು ಜಿಲ್ಲಾಧಿಕಾರಿಗೆ ಕೊಟ್ಟಿರುವುದು ಪ್ರಜಾಪ್ರಭುತ್ವಕ್ಕೆ ವಿರೋಧಿಯಾಗಿದೆ. ಪ್ರಧಾನ ಅಥವಾ ಉಪಪ್ರಧಾನರು ಅಧಿಕಾರದಲ್ಲಿ ಮುಂದುವರಿಯಬೇಕೆ ಅಥವಾ ಅವರನ್ನು ತೆಗೆಯಬೇಕೆ ಎಂಬುದರ ಕುರಿತು ವಿಶೇಷ ಸಭೆ ಕರೆದು ಅಲ್ಲಿ ನಿರ್ಣಯ ತೆಗೆದುಕೊಳ್ಳುವಂಥ ಅಧಿಕಾರವನ್ನು ಸ್ವತಃ ಅಧ್ಯಕ್ಷ ಹಾಗೂ ಸದಸ್ಯರುಗಳಿಗೇ ನೀಡಬೇಕು.

೧೦) ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರುಗಳೇ ಎಲ್ಲ ಉಪಸಮಿತಿಗಳ ಚಾಲನೆಯ ಸೂತ್ರಧಾರಿಗಳೂ ಆಗುವಂತೆ ಮಸೂದೆ ವಿಧಿಸಿದೆ. ಇದು ಸ್ಪಷ್ಟವಾಗಿ ಅಸಂಗತ. ಉಪಸಮಿತಿಗಳ ರಚನೆ-ನೇಮಕಗಳನ್ನು ಕುರಿತ ಸೂಚಿತ ಕ್ರಮವನ್ನು ಬದಲಾಯಿಸಬೇಕು.

೧೧) ಜಿಲ್ಲಾ ಪರಿಷತ್ತುಗಳ ಹಣಕಾಸಿನ ಅನುದಾನ ಕುರಿತು ಶಿಫಾರಸು ಮಾಡುವ ತ್ರಿಸದಸ್ಯ ಹಣಕಾಸು ಆಯೋಗಕ್ಕೇ ಮಂಡಲ ಪಂಚಾಯತಗಳ ಅನುದಾನ ಶಿಫಾರಸಿನ ಅಧಿಕಾರವನ್ನೂ ವಹಿಸಬಹುದು.

೧೨) ಪಂಚಾಯತಿಗಳಿಗೆ ವಹಿಸಲಾದ ತೆರಿಗೆ, ಶಿಕ್ಷಣ, ನ್ಯಾಯದಾನ ಇವುಗಳ ಬಾಬಿನಲ್ಲಿ ಈಗ ಅಸ್ತಿತ್ವದಲ್ಲಿರುವ ಆಡಳಿತ ವ್ಯವಸ್ಥೆಯೊಂದಿಗಿನ ಸಂಬಂಧದ ಸ್ವರೂಪ ಅಸ್ಪಷ್ಟವಾಗಿದೆ.

೧೩) ಜಿಲ್ಲಾ ಮೂಲಗಳಿಂದ ಪಂಚಾಯತಿಗಳಿಗೆ ಬರಬೇಕಾದ ಹಣದ ಪ್ರಮಾಣ ಖಚಿತವಾಗಿ ಸೂಚಿಸಿಲ್ಲ.

೧೪) ಸರಕಾರೀ-ಮಾನ್ಯ ಸಂಸ್ಥೆಗಳಿಗೆ ಮಾತ್ರ ಪ್ರಾತಿನಿಧ್ಯದ ಅವಕಾಶವಿದ್ದು, ಯೋಗ್ಯ ಸೇವೆ ಸಲ್ಲಿಸುವ ಸ್ಥಿತಿಯಲ್ಲಿರುವ ಸ್ವಯಂಸೇವಾ ಸಂಸ್ಥೆಗಳನ್ನು ದೂರವಿರಿಸಲಾಗಿದೆ.

೧೫) ಧಾರ್ಮಿಕ ಸಂಸ್ಥೆಗಳ ಆಡಳಿತದ ಭಾರವನ್ನು ಮಂಡಲ ಪಂಚಾಯತಿಗಳ ಮೇಲೆ ಹೇರಬಾರದು.

೧೬) ಪರಿಸರ ಮಾಲಿನ್ಯಕ್ಕೆ ಕಾರಣವಾಗುವವರನ್ನು ಉಗ್ರ ಶಿಕ್ಷೆಗೆ ಒಳಪಡಿಸಬೇಕು. ಜಿಲ್ಲಾ ಪರಿಷತ್ತು ಈ ವಿಷಯಕ್ಕೆ ಸಂಬಂಧಿಸಿದಂತೆ ಅನುಮತಿ ಪತ್ರ ಕೊಡುವಾಗ ಮಂಡಲ ಪಂಚಾಯತಿಗಳ ಅಭಿಪ್ರಾಯಗಳನ್ನು ಕೇಳುವಂತಿರಬೇಕು.

೧೭) ಮಂಡಲ ಪಂಚಾಯತಿಗಳನ್ನು ವಿಸರ್ಜಿಸುವ ಹಕ್ಕು ಸರ್ಕಾರಕ್ಕಿರುವುದರಿಂದ ಪ್ರಭಾವೀ ಕೈಗಾರಿಕೋದ್ಯಮಿಗಳು ಹಾಗೂ ಇತರರು ಇದನ್ನು ದುರುಪಯೋಗಪಡಿಸಿಕೊಳ್ಳುವುದು ಖಂಡಿತ. ಇದಕ್ಕೆ ಅವಕಾಶವಿರಬಾರದು.

ಪ್ರತಿಗಳು ದೊರೆಯುವ ಸ್ಥಳ :

ಕರ್ನಾಟಕ ಗ್ರಾಮಾಭ್ಯುದಯ ಸ್ವಯಂಸೇವಾ ಸಂಸ್ಥೆಗಳ ಒಕ್ಕೂಟ
39 (ಮಹಡಿ), 8ನೇ ಮೇಯ್ನ್, 13ನೇ ಕ್ರಾಸ್, ಮಲ್ಲೇಶ್ವರಂ,
ಬೆಂಗಳೂರು - 560 003

ಬೆಲೆ : 50 ಪೈಸೆ

Published by Federation of Voluntary Organisations for Rural Development in Karnataka, Medleri - 581 211. Printed at Shalivahan Printers, Bangalore - 560 053.